ಚಲನಚಿತ್ರ ನಿರ್ದೇಶಕ, ಪತ್ರಿಕಾ ಸಂಪಾದಕ ಹೀಗೆ – ಸಾಂಸ್ಕೃತಿಕ ಕ್ಷೇತ್ರದ ನಾಯಕನಾಗಿ ಪ್ರಭಾವಿ ವ್ಯಕ್ತಿತ್ವವನ್ನು ಬೆಳೆಸಿಕೊಂಡವರು 'ಎಂ.ಟಿ.' ಎಂದೇ ಖ್ಯಾತರಾದ ವಾಸುದೇವನ್ ನಾಯರ್. ಕೇರಳದ ಬದುಕಿನ ಸೌಂದರ್ಯ ಹಾಗೂ ಸಂಕೀರ್ಣತೆಗಳನ್ನು ತಮ್ಮ ಲೇಖನಿಯಿಂದ ಚಿತ್ರಿಸಿದರು. ವಳ್ಳುವ ನಾಡಿನ ಗ್ರಾಮೀಣ ಬದುಕಿನಲ್ಲಿ ಗಟ್ಟಿಯಾಗಿ ಬೇರೂರಿ ದಿಗಂತವ್ಯಾಪಿ ಬೆಳೆದರು. ಮಲಯಾಳಿಗರ ಮಾನಸಿಕ ಸ್ಥಿತಿಯಿಂದ ಸಾಮಾಜಿಕ ಮನಸ್ಸುಗಳವರೆಗಿನ ಚಿತ್ರಗಳನ್ನು ಎಂ.ಟಿ. ತಮ್ಮ ಕೃತಿಗಳಲ್ಲಿ ನೀಡಿದರು.

'ಇರುಳಿನ ಆತ್ಮ', 'ಕುಟ್ಯಕ್ಕ' ಮೊದಲಾದ ಅನೇಕ ಕಥೆಗಳ ಮೂಲಕ ಮಲಯಾಳಂ ಕಥಾಖ್ಯಾನಗಳನ್ನು ಭಾವುಕತೆಯವರೆಗೂ ವಿಸ್ತರಿಸಿದರು. 'ಚೌಕಟ್ಟಿನ ಮನೆ', 'ಭೀಮಾಯಣ' ಮೊದಲಾದ ಕಾದಂಬರಿಗಳು ಮಹತ್ವದ ರಚನೆಗಳಾಗಿವೆ. ಅಂತರರಾಷ್ಟ್ರೀಯ ಪ್ರಶಸ್ತಿ ಪುರಸ್ಕಾರಗಳು ಅವರನ್ನು ಅರಸಿ ಬಂದಿವೆ. ಅವರ ಚಲನಚಿತ್ರಗಳಿಗೂ ಜಾಗತಿಕ ಪ್ರಾಶಸ್ತ್ಯ ಲಭಿಸಿದೆ. ಎಂ.ಟಿ. ಅವರ ಬಹುಮುಖ ಪ್ರತಿಭೆಗೆ ದೃಷ್ಟಾಂತಗಳಾಗಿ ಅವರು ನಿರ್ದೇಶಿಸಿದ ಏಳು ಚಿತ್ರಗಳು, ಚಿತ್ರಕತೆ ಬರೆದ ಐವತ್ತನಾಲ್ಕು ಚಿತ್ರಗಳು ನಮ್ಮ ಮುಂದಿವೆ.

ಮತ ನಿರಪೇಕ್ಷವಾದ ಮನಸ್ಥಿತಿಯನ್ನು ಸದಾ ಕಾಯ್ದುಕೊಂಡ ಎಂ.ಟಿ. ತಮ್ಮ ಕಥಾಪಾತ್ರಗಳ ಮೂಲಕ ಎಲ್ಲ ಧರ್ಮೀಯರನ್ನು ಸಮಾನ ಮಾನವೀಯ ಪ್ರೀತಿಯಿಂದ ನೋಡುವಂತೆ ಮಾಡಿದರು. ಜನರ ಮನಸ್ಸುಗಳನ್ನು ಒಗ್ಗೂಡಿಸಲು ಬೇಕಾದ ಸಾಮರ್ಥ್ಯವಿರುವ ಒಂದು ಉಪಾಧಿಯಾಗಿ ಸಾಹಿತ್ಯವನ್ನು ಪರಿಭಾವಿಸಿದ್ದರು. ಹಾಗೆ ಒಂದು ದೊಡ್ಡ ಮಾನವೀಯ ಲೋಕವನ್ನು ಸಾಹಿತ್ಯದ ಮೂಲಕ ತೋರಿಸಿಕೊಟ್ಟರು. ಅಪ್ಪು ನೆಡುಂಗಾಡಿ, ಚಂದು ಮೇನೋನ್ ಮೊದಲಾದವರ ಮೂಲಕ ನಾಂದಿ ಹಾಡಿದ ಆಧುನಿಕ ಮಲಯಾಳಂ ಕಥನ ಸಾಹಿತ್ಯ ಮುಂದೆ ತಗಳಿ, ಬಷೀರ್, ಪೊಟ್ಟಕಾಡ್ ಮೊದಲಾದವರ ಮೂಲಕ ವಿಭಿನ್ನ ಸಾಧ್ಯತೆಗಳನ್ನು ತೆರೆದು ತೋರುತ್ತಿರುವ ಕಾಲಘಟ್ಟದಲ್ಲಿ ಅವರೊಡನೆ ಸರಿಮಿಗಿಲಾಗಿ ಹೆಜ್ಜೆಹಾಕಿದ ಅಪ್ರತಿಮ ಪ್ರತಿಭೆ ಎಂ.ಟಿ. ವಾಸುದೇವನ್ ನಾಯರ್. ತನ್ನ ಇಪ್ಪತ್ತೂರನೆಯ ವಯಸ್ಸಿನಲ್ಲಿ 'ಚೌಕಟ್ಟಿನ ಮನೆ' ಕಾದಂಬರಿಯನ್ನು ಬರೆದು ಕೇರಳೀಯರ ಮನೆಮಾತಾದವರು. ಎಂ.ಟಿ. ಎಂಬ ಎರಡಕ್ಷರದ ಮೂಲಕ ಸಾಹಿತ್ಯ ಲೋಕದಲ್ಲಿ ಹೆಸರಾಗಿದ್ದ ವಾಸುದೇವನ್ ನಾಯರ್ ನಾಸ್ಟಾಲ್ಜಿಯಾಗಳನ್ನು ಮರುನಿರೂಪಿಸುತ್ತಲೇ ಸಮಾಜದ ಒಳಗಿನ ಅಸಹನೆಗಳಿಗೆ ಕಥಾಪಾತ್ರಗಳ ಮೂಲಕ ಧ್ವನಿಯಾದರು.

ಎಂ.ಟಿ.ಯವರ ಕಥೆಗಳೆಂದರೆ ಸಾಹಿತ್ಯ ಲೋಕದ ಸೌಂದರ್ಯದ ಅಮೂಲ್ಯ ಗಣಿಗಳು. ಕುಡಲೂರು ಎಂಬ ಪುಟ್ಟ ಗ್ರಾಮದಿಂದ ಅವರು ಅನೇಕ ಕಥೆಗಳ ಉತ್ಖನನ ನಡೆಸಿದರು. ಏಕಾಂಗಿಗಳ, ಪರಾಜಿತರ, ಅದೃಷ್ಟಹೀನರ ಮುಗಿಯದ ಕಥೆಗಳನ್ನು, ವೇಲಾಯುಧನ್, ಕುಟ್ಟಕ್ಕ ಮೊದಲಾದ ಮರೆಯಲಾರದ ಪಾತ್ರಗಳನ್ನು ಚಿತ್ರಿಸುವಾಗ ತಮ್ಮ ನಾಲ್ಕು ಸುತ್ತಿನ ಮನೆ, ಹಳ್ಳಿ ಹಾಗೂ ಸಮಾಜದ ಮನುಷ್ಯರ ಮಹಾದುರಂತಗಳ ನೆರಳು ಹಿಂಬಾಲಿಸುತ್ತಲೇ ಇರುತ್ತದೆ ಎಂಬುದನ್ನು ಅವರ ಸಾಹಿತ್ಯ ಕೃತಿಗಳು ಸಾಬೀತುಪಡಿಸುತ್ತವೆ. ಅವರ ಕಥೆಗಳು ಓದುಗರನ್ನು ಸೆಳೆಯಲು ಇದುವೇ ಬಹುಮುಖ್ಯ ಕಾರಣವಿರಬಹುದೆನಿಸುತ್ತದೆ. ಅವರ ಕಥಾಪಾತ್ರಗಳು ಓದುಗರ ಮನಸ್ಸಿಗೊಂದು ನೋವಿನ ಅನುಭವವನ್ನು ಕೊಟ್ಟೇ ಕೊಡುತ್ತವೆ. 'ಚೌಕಟ್ಟಿನ ಮನೆ', 'ದುರ್ಬೀಜ', 'ಕಾಲ' ಮೊದಲಾದ ಕಾದಂಬರಿಗಳು ಸಾಹಿತ್ಯ ಸೌಂದರ್ಯದ ಶಿಲ್ಪಗಳೆನಿಸಿವೆ. ಓದುಗರಲ್ಲಿ ದಿಗ್ಭ್ರಮೆ ಮೂಡಿಸುವ ಸಾಹಿತ್ಯ ಸೃಷ್ಟಿಗಳಾಗಿ 'ಮಂಜು', 'ಭೀಮಾಯಣ' ಕಾದಂಬರಿಗಳು ನಮ್ಮ ಓದಿಗೆ ದಕ್ಕುತ್ತವೆ.

ಕುಡಲೂರು ಎಂಬ ಹಳ್ಳಿ, ಹಳ್ಳಿಯ ಜನ, ಹಳ್ಳಿಯ ಐತಿಹ್ಯಗಳು, ಅಪ್ಪ, ಅಮ್ಮ, ಬಂಧುಗಳು, ಸಹೋದರರು ಹೀಗೆ ಎಲ್ಲರೂ ಎಂ.ಟಿ.ಯವರ ಲೇಖನಿಯ ಸ್ಪರ್ಶದಿಂದ ಸಾಹಿತ್ಯ ಲೋಕದಲ್ಲಿ ಅಮರರಾದರು. 'ದುರ್ಬೀಜ' ಕಥೆಯ ಗೋವಿಂದನ್ ಕುಟ್ಟಿಯೂ ಸಂಬಂಧದಲ್ಲಿ ಎಂ.ಟಿ.ಯವರಿಗೆ ಮಾವನಾಗಬೇಕಂತೆ. ಗೋವಿಂದನ್ ಕುಟ್ಟಿ ಎಂಬ ಹೆಸರಿನಲ್ಲಿಯೇ ಜೀವಿಸಿದ್ದರೂ ಆತ ದುರ್ಬೀಜದ ಗೋವಿಂದನ್ ಕುಟ್ಟಿಯಂತೆ ವಿಧಿಯಾಟಕ್ಕೆ ತುತ್ತಾದ ಅಸಹಾಯಕ ವ್ಯಕ್ತಿಯಾಗಿರಲಿಲ್ಲ. ಕಳ್ಳತನ, ಸೋಮಾರಿತನಗಳಿಂದ ತನ್ನಿಷ್ಟದಂತೆ ಬದುಕಿದ ಒಬ್ಬ ವ್ಯಕ್ತಿಯಾಗಿದ್ದ. ಆತ ಮತಾಂತರವಾಗಿ ಮುಸಲ್ಮಾನನಾದುದು ಮತ್ತೆ ಮತಾಂತರವಾಗಿ ಹಿಂದೂವಾದುದು ಹಳ್ಳಿಯಲ್ಲಿ ನಡೆದ ಘಟನೆಯೇ ಆಗಿತ್ತು. ಎಂ.ಟಿ.ಯವರ ಮತಾತೀತ ನಿಲುವು